ಆರ್.ಎ. - 01/2025

ಎ.ಡಬ್ಲ್ಯು. - 01

**ದಿನಾಂಕ 19-02-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ - ಮೇಲ್ಮನವಿದಾರರ ಪರ ವಕೀಲರಿಂದಃ**

ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಇವು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದೆ. ನಾನು ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿಪಿ-1 | ಜ್ಞಾಪನ ಪತ್ರ |
| ನಿಪಿ-2 | ಸರ್ಕಾರದ ಪ್ರಧಾನ ಕಾರ್ಯದರ್ಶಿ ಉಪನಿರ್ದೇಶಕರಿಗೆ ಕಳುಹಿಸಿದ ಪತ್ರದ ಪ್ರತಿ |
| ನಿಪಿ-3 | ಸರ್ಕಾರದಿಂದ ಆದ ಪ್ರೋಸಿಡಿಂಗ್ಸ್ ನ ಪ್ರತಿ |

ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಬೇಕಾಗಿ ವಿನಂತಿ

**ಪಾಟೀ ಸವಾಲು ಃ ಎದುರುದಾರರ ಪರ ವಕೀಲರಿಂದ.**

ಅಧಿಕಾರ ಪತ್ರವನ್ನು ಈ ದಿನ ಬೆಳಿಗ್ಗೆ ನನಗೆ ಕೊಟ್ಟಿರುತ್ತಾರೆ. ಮೇಲ್ಮನವಿ ಸಲ್ಲಿಸಲು ಮಾಹಿತಿಯನ್ನು ಉಪನಿರ್ದೇಶಕರು, ಶಿಕ್ಷಣ ಇಲಾಖೆ, ಉಡುಪಿ ಜಿಲ್ಲೆಯವರು ಕೊಟ್ಟಿರುತ್ತಾರೆ . ಡಿಕ್ರಿ ಆದ ಬಗ್ಗೆ ನಮಗೆ ಪ್ರಥಮ ವಾಗಿ ಮಾಹಿತಿ ಯಾವಾಗ ಬಂತು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ಉಪನಿರ್ದೇಶಕರು ಕೊಟ್ಟ ಒಂದು ದಾಖಲೆಯನ್ನು ತೋರಿಸಿ ಸದ್ರಿ ದಾಖಲೆಯನ್ನು ಉಪನಿರ್ದೇಶಕರು ಕೊಟ್ಟರು ಅಲ್ಲವೇ ಎಂದು ಕೇಳಿದ ಮೇರೆಗೆ ಸಾಕ್ಷಿ ಹೌದು ಒಂದು ಒಪ್ಪಿಕೊಂಡಿದ್ದರಿಂದ ಸದ್ರಿ ದಾಖಲೆಯನ್ನು ನಿಆರ್ 1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಅದನ್ನು ಉಪನಿರ್ದೇಶಕರು ವಿಭಾಗಿಯಾ ಕಾರ್ಯದರ್ಶಿಗಳಿಗೆ

ಬರೆದ ಪತ್ರ ಎಂದು ಒಪ್ಪಿಕೊಂಡಿದ್ದು, ಅದನ್ನು ನಿಆರ್ 2 ಎಂದು ಗುರುತಿಸಲಾಯಿತು . OS no. 102/2021 ರಲ್ಲಿ ನಾವು ವಕಾಲತು ಹಾಕಿದ್ದೇವೆ ಎಂದರೆ ಸರಿ. ಕೆಳ ನ್ಯಾಯಾಲಯದಲ್ಲಿ ಕೇಸು ಹೇಗೆ ಮುಂದುವರಿಯಿತು ಮತ್ತು ಯಾವಾಗ ತೀರ್ಪು ಮತ್ತು ಡಿಕ್ರಿ ಆಯಿತು ಎಂದು ನನಗೆ ಗೊತ್ತು ಎಂದರೆ ಸರಿಯಲ್ಲ. ಕೆಳ ನ್ಯಾಯಾಲಯದಲ್ಲಿ ಡಿಕ್ರಿ ಆದ ಬಗ್ಗೆ ನಮಗೆ ಗೊತ್ತಿದ್ದರೂ ಕೂಡ ಗೊತ್ತಿಲ್ಲ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ . ಕೆಳ ನ್ಯಾಯಾಲಯ ಆದೇಶ ಮಾಡಿದ ನಂತರ ಸದ್ರಿ ಆದೇಶದ ಕಾಪಿಯನ್ನು ಡಿಡಿಪಿಐ ರವರಿಗೆ ಕೊಟ್ಟ ಮೇರೆಗೆ ಅವರು ಎದುರುದಾರರು ವ್ಯಾಸಾಂಗ ಮಾಡಿದ ಎಲ್ಲಾ ಶಾಲೆಗಳಿಗೆ ನಿರ್ದೇಶನ ನೀಡಿ ಅದರ ಪ್ರಕಾರ ಹೆಸರು ಮತ್ತು ಹುಟ್ಟಿದ ದಿನಾಂಕ ತಿದ್ದುಪಡಿ ಆಗಿದೆ ಎಂದರೆ ಸರಿ. ನಮ್ಮ ತಪ್ಪಿನಿಂದ ಸರಿಯಾದ ಸಮಯದಲ್ಲಿ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ . ಕಾಲ ವಿಳಂಭ ಮನ್ನಿಸಲು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ .

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.